ಡಾ|| ಹೆಚ್.ಆರ್. ರಾಜು (ವಿಜ್ಞಾನ, ಯಂತ್ರಕಲಾ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ರಾಜ್ಯ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಈ) ಕಾರ್ಖಾನೆ ಮತ್ತು ಬಾಯ್ಲರುಗಳ ಮುಖ್ಯ ಪರಿವಿಕ್ಷಕರ ವರದಿಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಎರಡು ಕಾರ್ಖಾನೆಗಳನ್ನು ಪ್ರಾರಂಭಿಸಲಾಗಿದ್ದು, ಈಗಾಗಲೆ 67 ಹಳೆಯ ಕಾರ್ಖಾನೆಗಳು ಇರುತ್ತವೆ.

ಉ) ಕಾರ್ಖಾನೆ ಮತ್ತು ಬಾಯ್ಲರುಗಳ ಮುಖ್ಯ ಪರಿವೀಕ್ಷಕರವರಿಂದ ವರದಿಯಾದಂತೆ ಕಾರ್ಖಾನೆಗಳ ಕಾಯ್ದೆ ಮತ್ತು ಅದರಡಿಯಲ್ಲಿ ರಚಿಸುವ ನಿಯಮಗಳಂತೆ ಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಅಗತ್ಯವಿದ್ದು, ಈ ಅಗತ್ಯಗಳನ್ನು ಉದ್ಯಮಗಳವರು ಪೂರೈಸುತ್ತಾರೆ.

ಕುಂದಾಪುರದ ಹಂಗ್ಳೂರಿನ ಗುರುರಾಜಭಟ್ಟರ ಪ್ರಕರಣ

555 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರದ ಹಂಗಳೂರಿನಲ್ಲಿ ಲಿಲ್ಲಿಬಾಯಿ ಹಾರ್ದಳ್ಳಿ ಮಂಡಳಿಯ ಗಣಪ ಮಡಿವಾಳ ಕೋಟೇಶ್ವರದ ಗುರುರಾಜಭಟ್ಟ ಪ್ರಕರಣಗಳನ್ನು ಸಿಒಡಿ ತನಿಖೆ ಒಳಪಡಿಸಿದ್ದು ನಿಜವೇ?

ಆ) ನಿಜವಾಗಿದ್ದಲ್ಲಿ ಈತನಕ ಸಿಒಡಿಯವರು ಕಾರ್ಯನಿರ್ವಹಿಸದಿರಲು ಕಾರಣವೇನು?

ಇ) ಒಂದು ಪಕ್ಷ ಸಿಒಡಿ ತನಿಖೆಗೆ ಒಳಪಡಿಸದಿದ್ದಲ್ಲಿ ಒಳಪಡಿಸುವ ಯೋಜನೆ ಸರ್ಕಾರದ ಮುಂದಿವೆಯೇ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು

ಆ) ಸರ್ಕಾರದ ಪತ್ರ ಸಂಖ್ಯೆ : ಒಇ 130 ಸಿಒಡಿ 94 ದಿನಾಂಕ 18-7-94ರರ ಪ್ರಕಾರ ಶ್ರೀಮತಿ ಲಿಲ್ಲಿಬಾಯಿ, ಗಣಪ ಮಡಿವಾಳ, ಗುರುರಾಜ ಭಟ್ಟ, ಇವರುಗಳ ಕೊಲೆ ಪ್ರಕರಣಗಳನ್ನು ದಿನಾಂಕ 9-8-94ರಂದು ಸಿಒಡಿಯಲ್ಲಿ ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ. ತನಿಖೆಯು ತೀವ್ರ ಪ್ರಗತಿಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಪೂರಕ ಟಿಪ್ಪಣಿ

ದಿನಾಂಕ 4-9-90 ರಂದು ಬೆಳಿಗ್ಗೆ 7-45 ರಿಂದ ರಾತ್ರಿ 9.30 ಗಂಟೆಯೊಳಗಾಗಿ ಫಿರ್ಯಾದಿ ಕೆ.ಎಂ. ಶಿವಾನಂದ, ಹಂಗಳೂರು ಇವರು ತಮ್ಮ ಮನೆಯಲ್ಲಿ ಇಲ್ಲದಿರುವಾಗ ಅವರ ಉಪ ಪತ್ನಿ ಶ್ರೀಮತಿ ಲಿಲ್ಲಿಬಾಯಿ, ಇವರನ್ನು ಯಾರೋ ದುಷ್ಕರ್ಮಿಗಳು ಕೊಲೆ ಮಾಡಿ ಮೃತಳ ಕೈಯಲ್ಲಿದ್ದ ಎರಡು ಚಿನ್ನದ ಬಳೆಗಳು ಮತ್ತು ಒಂದು ಜೊತೆ ಕಿವಿಯಲ್ಲಿನ ಬಂಗಾರದ ಬೆಂಡೋಲೆಯನ್ನು ಅಪಹರಿಸಿರುತ್ತಾರೆ. ಈ ಬಗ್ಗೆ ಕುಂದಾಪುರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 137 : 90 ಕಲಂ 302, 392 ಐ.ಪಿ.ಸಿ. ಪ್ರಕಾರ ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸಿ ಇದು

ಪತ್ತೆಯಾಗದ ಪ್ರಕರಣವೆಂದು ನ್ಯಾಯಾಲಯಕ್ಕೆ ದಿನಾಂಕ 20-4-92ರಂದು ಅಂತಿಮ 'ಸಿ' ವರದಿಯನ್ನು ಸಲ್ಲಿಸಲಾಗಿರುತ್ತದೆ. ಈ ಪ್ರಕರಣವನ್ನು ದಿನಾಂಕ 9-8-94ರಂದು ಸಿಡಿಯಲ್ಲಿ ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

ದಿನಾಂಕ 7-5-94ರ ರಾತ್ರಿ 8.30ರ ಸಮಯದಲ್ಲಿ ಕೋಟೇಶ್ವರ ಗ್ರಾಮದ ಫಿರ್ಯಾದಿ ರಾಘವೇಂದ್ರರ ಮನೆಯ ಗೇಟಿನ ಸಮೀಪದಲ್ಲಿ ಫಿರ್ಯಾದಿಯವರ ತಂದೆ ಕೆ.ಆರ್. ಗುರುರಾಜ ಭಟ್ಟರವರು ತಿವಿತದ ಗಾಯಗಳಿಂದ ಕುಸಿದು ಬಿದ್ದಿದ್ದರು. ಫಿರ್ಯಾದಿಯು ಹತ್ತಿರದ ಎನ್.ಆರ್. ಆಚಾರ್ಯ ನರ್ಸಿಂಗ್ ಹೋಂಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಅವರು ಮೃತಪಟ್ಟಿರುತ್ತಾರೆ. ಈ ಪ್ರಕರಣವನ್ನು ದಿನಾಂಕ 9-8-94 ರಂದು ಸಿಒಡಿಯಲ್ಲಿ ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

ದಿನಾಂಕ 24-8-93ರಂದು ರಾತ್ರಿ ಸುಮಾರು 8 ಘಂಟೆಯ ಸಮಯದಲ್ಲಿ ಹಾರ್ದಹಳ್ಳಿ ಮಂಡಳ್ಳಿ ಗ್ರಾಮದ ಜನ್ನಾಡಿಯಲ್ಲಿ ವಾಸವಾಗಿದ್ದ ಗಣಪ ಮಡಿವಾಳರವರು ತನ್ನ ಮನೆಯ ಎದುರಿನಲ್ಲಿರುವ ಬಾವಿಯಲ್ಲಿ ನೀರು ಸೇದುತ್ತಿದ್ದಾಗ ಯಾರೋ ಅಪರಿಚಿತರು ಜೀಪಿನಲ್ಲಿ ಬಂದು ಆತನನ್ನು ಕರೆದುಕೊಂಡು ಹೋಗಿ ಮನೆಯ ಹಿಂಭಾಗದ ಕಾಡಿನಲ್ಲಿ ಕೊಲೆ ಮಾಡಿರುತ್ತಾರೆ. ಈ ಪ್ರಕರಣವನ್ನು ದಿನಾಂಕ 9-8-94ರಂದು ಸಿಒಡಿಯಲ್ಲಿ ತನಿಖೆಗೆ ಕೈಗೆತ್ತಿಕೊಂಡಿರುತ್ತದೆ.

ಕರ್ನಾಟಕ ಸರ್ಕಾರ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡುವುದು

27 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದವರು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಎಲ್ಲಾ ಇಲಾಖೆಗಳಿಗೂ ಆದೇಶ ನೀಡಿಲ್ಲವೆ?

ಆ) ಇದುವರೆಗೆ ಯಾವ ಯಾವ ಇಲಾಖೆಗಳಲ್ಲಿ ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ (ವಿವರ ನೀಡುವುದು)

ಇ) ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದಿರುವ ಇಲಾಖೆ ಮುಖ್ಯಸ್ಥರ ಮೇಲೆ ತೆಗೆದುಕೊಂಡಿರುವ ಕ್ರಮವೇನು?

ಈ) ಮೀಸಲಾತಿ ಜಾರಿಯಲ್ಲಿ ಉಪೇಕ್ಷೆ ಮಾಡಿರುವ ಅಧಿಕಾರಿಗಳ ವಿರುದ್ಧ 6 ತಿಂಗಳ ಸಜಾ 1000 ರೂಪಾಯಿಗಳ ದಂಡ ಎಂದು ಸರ್ಕಾರ ಆದೇಶ ಹೊರಡಿಸಿರುವುದನ್ನು ಅನುಸರಿಸಿ ಎಷ್ಟು ಅಧಿಕಾರಿಗಳ ಮೇಲೆ ಈ ಆದೇಶ ಜಾರಿ ಮಾಡಲಾಗಿದೆ?

ಉ) 1993ರ ಜನವರಿಯಲ್ಲಿ ಮುಖ್ಯ ಮಂತ್ರಿಗಳು ಸದನದಲ್ಲಿ ಉತ್ತರಿಸುತ್ತಾ ಡಿ.ಪಿ.ಎ.ಆರ್.ನಲ್ಲಿ ಮಾನಿಟರಿಂಗ್ ಸೆಲ್ ಮಾಡಿ ಒಂದು ತಿಂಗಳೊಳಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಸುತ್ತೇನೆಂದು ಆಶ್ವಾಸನೆ ನೀಡಿರುವುದು ನಿಜವೇ? ಹಾಗಿದ್ದಲ್ಲಿ ಈ ಆಶ್ವಾಸನೆ ನೆರವೇರಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ನೀಡಿದೆ.

ಆ) ಇಲಾಖಾವಾರು ಮಾಹಿತಿ ಲಭ್ಯವಿಲ್ಲ. ಒಟ್ಟು 535 ಹುದ್ದೆಗಳನ್ನು ಭರ್ತಿ ಮಾಡಿದೆ.

ಇ) ಅಂತಹ ಪ್ರಕರಣ ಯಾವುದೂ ಇರುವುದಿಲ್ಲ.

ಈ) ಅಂತಹ ಪ್ರಕರಣ ಯಾವುದೂ ಇರುವುದಿಲ್ಲ.